(ಸಾಕ್ಷಿಯನ್ನು ದಿನಾಂಕಃ 27.11.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು. )

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರವರಿಂದ**

ನಾನು 10 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ವ್ಯವಸಾಯ ಮತ್ತು ಆಟೋ ಓಡಿಸುತ್ತೇನೆ. ಆಟೋವನ್ನು ಬೆಂಗಳೂರಿನಲ್ಲಿ ಓಡಿಸುತ್ತೇನೆ. ನನಗೆ ಇಬ್ಬರು ಮಕ್ಕಳು ಇರುತ್ತಾರೆ. ನನ್ನ ಮಗಳು ಬಿ ಇ ವಿದ್ಯಾಭ್ಯಾಸ ಮತ್ತು ಮಗ ಡಿಪ್ಲೋಮೋ ವಿದ್ಯಾಭ್ಯಾಸವನ್ನು ಬೆಂಗಳೂರಿನಲ್ಲಿ ಮಾಡುತ್ತಾರೆ. ನನ್ನ ಹೆಂಡತಿ ಗೃಹಿಣಿಯಾಗಿರುತ್ತಾರೆ. ನಾನು ಬೆಂಗಳೂರಿನಲ್ಲಿ ವಾಸವಿರುತ್ತೇನೆ. ಸ್ವಂತ ಮನೆ ಇರುವುದಿಲ್ಲ, ಬಾಡಿಗೆ ಮನೆಯಲ್ಲಿ ವಾಸಿಸುತ್ತೇನೆ. 12 ಸಾವಿರ ಬಾಡಿಗೆ ಕಟ್ಟುತ್ತೇನೆ. 1 ನೇ ಪ್ರತಿವಾದಿ ನನ್ನ ತಂದೆ. 1 ನೇ ಪ್ರತಿವಾದಿ ನಂಜುಂಡಯ್ಯ ಉಃ ಸ್ವಾಮಿರವರ ಮಗ ಎನ್ ನಂಜುಂಡಯ್ಯರವರಿಂದ ದಾವಾ ಐಟಂ ನಂಃ 9 ಸರ್ವೆ ನಂಃ 117/1 ರಲ್ಲಿ 12 ಗುಂಟೆ ಜಮೀನನ್ನು ಖರೀದಿಸಿರುತ್ತಾರೆಂದರೆ ಸರಿ. ದಾವಾ ಐಟಂ ನಂಃ 7 ರ ಸರ್ವೆ ನಂಃ 81/4 ವಿಸ್ತೀರ್ಣ 17.04 ಗುಂಟೆ ಜಮೀನನ್ನು ನರಸಿಂಹಶೆಟ್ಟಿ ಮಗ ಚೆನ್ನಶೆಟ್ಟಿರವರಿಂದ ಖರೀದಿಸಿರುತ್ತಾರೆಂದರೆ ಸರಿ. ಈ ಎರಡು ಆಸ್ತಿಗಳು 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಗಳು ಉಳಿದ ಆಸ್ತಿಗಳು 1 ನೇ ಪ್ರತಿವಾದಿ ಪಿತ್ರಾರ್ಜಿತ ಆಸ್ತಿ ಎಂದರೆ ಸಾಕ್ಷಿಯು ಒಂದು ಕುಟುಂಬದ ಆದಾಯದಿಂದ ಗಳಿಸಿದ ಆಸ್ತಿ ಎನ್ನುತ್ತಾರೆ. ನಾನು 10 ನೇ ವಯಸ್ಸಿಗೆ ಊರು ಬಿಟ್ಟು ಬೆಂಗಳೂರಿಗೆ ಸೇರಿಕೊಂಡು ಯಾವಾಗಲೂ ಬೆಂಗಳೂರಿಗೆ ಬಂದಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂಃ 7 ಮತ್ತು 9 ನ್ನು ಬಿಟ್ಟು ಉಳಿಕೆ ಆಸ್ತಿಗಳನ್ನು ವಿಭಾಗ ಮಾಡಿಕೊಳ್ಳಲು ಪ್ರತಿವಾದಿಗಳ ತಕರಾರು ಇಲ್ಲ ಎಂದರೆ ಸಾಕ್ಷಿಯು ದಾವಾ ಐಟಂ ನಂಃ 7 ಮತ್ತು 9 ಸಹ ಒಟ್ಟು ಕುಟುಂಬದ ಆಸ್ತಿಗಳಾಗುವುದರಿಂದ ಅವುಗಳಲ್ಲಿ ಭಾಗಾಂಶ ಇರುತ್ತದೆ ಎನ್ನುತ್ತಾರೆ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸ ಇ ಓ.

2 ನೇ ಅಪರ ಸಿವಿಲ್ ನ್ಯಾಯಾಧೀಶರು

ಸಾಕ್ಷಿ ಸಹಿ

ಮತ್ತು ಜೆ ಎಂ ಎಫ್ ಸಿ ಮದ್ದೂರು.